ದಿನಾಂಕ 31–12–92ರಂದು ಜಿಲ್ಲಾಪರಿಷತ್ ವ್ಯಾಪ್ತಿಯಿಂದ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಆ) ಯಾವುದೂ ಇಲ್ಲ.

ಇ) ಉಡುಪಿ ತಾಲ್ಲೂಕಿನ ಕಡಪು ಕರಿಯ ಎಂಬಲ್ಲಿ ಕಿಂಡಿ ಅಣೆಕಟ್ಟು ಇದ್ದು ಈ ಕಿಂಡಿ ಅಣೆಕಟ್ಟು ನವೆಂಬರ್ 1992ರ ಚಂಡಮಾರುತದಿಂದ ಸ್ವಲ್ಪ ಹಾಳಾಗಿದ್ದು ಇದರ ದುರಸ್ತಿ ಕಾರ್ಯವನ್ನು ಕೈಗೊಂಡಿದ್ದು ಪ್ರಗತಿಯಲ್ಲಿರುತ್ತದೆ. ಜಿಲ್ಲಾಪರಿಷತ್ತಿನಿಂದ ವರ್ಗಾಯಿಸಿರುವ 43 ಕಿಂಡಿ ಅಣೆಕಟ್ಟುಗಳ ದುರಸ್ತಿ ಬಗ್ಗೆ ಸ್ಥಳ ಪರಿವೀಕ್ಷಣೆ ನಡೆಸಿ, ಅಗತ್ಯವಿದ್ದಲ್ಲಿ ಅನುದಾನದ ಲಭ್ಯತೆಯ ಮೇರೆಗೆ ದುರಸ್ತಿ ಕಾರ್ಯಕೈಗೊಳ್ಳಲಾಗುವುದು.

ಈ) ವಿನ್ಯಾಸದಲ್ಲಿ ದೋಷಗಳು ಇರುವುದಿಲ್ಲ.

ಅಧ್ಯಕ್ಷರು:– ಸಭೆಯ ಮುಂದೆ ಇಡಲಾಯಿತು. ಪ್ರಶ್ನೋತ್ತರ ಕಾಲ ಮುಗಿಯಿತು.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದ ಟಿ..ಪಿ.ಸಿ.ಎಂ.ಎಸ್.ನಲ್ಲಿ ಸಕ್ಕರೆ ಅಕ್ರಮ ಮಾರಾಟ ಪತ್ತೆ ಹಾಗೂ ಮಂಡಲ ಪಂಚಾಯತಿಯಲ್ಲಿಟ್ಟ ಸಕ್ಕರೆ ನಾಪತ್ತೆಯ ಬಗ್ಗೆ 10ನೇ ತಾರೀಖು ಪ್ರಸ್ತಾಪ ಮಾಡಿದ್ದೆ. ಮಂತ್ರಿಗಳು ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು. ಆದ್ದರಿಂದ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಹೇಳಿಕೆ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಸಚಿವರಿಂದ ಹೇಳಿಕೆ

ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದ ಟಎಪಿಸಿಎಂಎಸ್‌ನಲ್ಲಿ ಸಕ್ಕರೆ ಅಕ್ರಮ ಮಾರಾಟ ಪತ್ತೆ ಹಾಗೂ ಮಂಡಲ ಪಂಚಾಯತಿಯಲ್ಲಿಟ್ಟ ಹಿಡಿದ ಸಕ್ಕರೆ ನಾಪತ್ತೆ

†ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):– ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 10–3–1993ರಂದು ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಚಾರದಲ್ಲಿ ಸಂಬಂಧಿಸಿದ ಅಧಿಕಾರಿಗಳಿಂದ ದೂರವಾಣಿ ಮೂಲಕ ಅದೇ ದಿನ ತುರ್ತು ಸಂದೇಶ ಪಡೆದು ಉತ್ತರ ನೀಡಿ, ವಿವರವಾದ ವರದಿಯನ್ನು ಪಡೆದು ಪುನಃ ಈ ಸದನದಲ್ಲಿ ಹೇಳಿಕೆ ನೀಡುವುದಾಗಿ ತಿಳಿಸಲಾಗಿತ್ತು.

ಅದರಂತೆ ಅದೇ ದಿನ ಎಂದರೆ 10–3–1993ರಂದೇ ಧಾರವಾಡ ಜಿಲ್ಲಾಧಿಕಾರಿಗಳನ್ನು ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮಕ್ಕೆ ಕಳಿಸಿ ತನಿಖೆ ನಡೆಸಿ ವಿವರಗಳನ್ನು ಪಡೆಯಲಾಗಿದೆ.

ಈ ತನಿಖೆಯಿಂದ ತಿಳಿದು ಬಂದಿರುವ ವಿಚಾರಗಳೆಂದರೆ:–

1. ದಿನಾಂಕ 5–3–1993ರಂದು 3 ಕ್ವಿಂಟಾಲ್ ಸಕ್ಕರೆಯನ್ನು ಮಾಸೂರಿನಲ್ಲಿ ಗ್ರಾಮಸ್ಥರು ತಮ್ಮ ವಶಕ್ಕೆ ಪಡೆದು, ಅದನ್ನು ಅದೇ ಗ್ರಾಮದ ಮಂಡಲ ಪಂಚಾಯತಿಯ ವಶಕ್ಕೆ ನೀಡಿದ್ದರು.
2. ಅದೇ ದಿನ ಎಂದರೆ 5–3–1993ರಂದು ರಾತ್ರಿ 9.00 ಗಂಟೆಯ ಸುಮಾರಿಗೆ ಮೂರು ಕ್ವಿಂಟಾಲ್ ಸಕ್ಕರೆಯು ಕಳ್ಳತನವಾಗಿದೆ.

3. ಕಳ್ಳತನದ ಬಗ್ಗೆ ಮಂಡಲ ಕಾರ್ಯದರ್ಶಿಯು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಅದನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿಕೊಂಡು ತನಿಖೆ ಮಾಡಲಾಗುತ್ತಿದೆ. ಕ್ರೈಂ ನಂಬರ್ 21:93.

4. ಈ 3 ಕ್ವಿಂಟಾಲ್ ಸಕ್ಕರೆಯು ಯಾರಿಗೆ ಸೇರಿದೆ ಎಂಬ ಬಗ್ಗೆ ಸ್ಪಷ್ಟವಾಗಿ ಈ ಹಂತದಲ್ಲಿ ತಿಳಿಯಲು ಸಾಧ್ಯವಾಗಿಲ್ಲವಾದರೂ ಸಹ, ಸದರಿ ಟಿಎಪಿಸಿಎಂಎಸ್‌ನ ಡಿಪೋ ಮ್ಯಾನೇಜರರು ಈ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಸಂಶಯಿಸಲಾಗಿದೆಯಾದ್ದರಿಂದ ಸಂಪೂರ್ಣ ತನಿಖೆಯನ್ನು ನಡೆಸಲು ಅನುಕೂಲವಾಗುವಂತೆ ಟಿಎಪಿಸಿಎಂಎಸ್‌ನಲ್ಲಿದ್ದ ದಾಖಲಾತಿಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ.

5. ತನಿಖೆಯು ಮುಕ್ತಾಯವಾಗಿ ತೀರ್ಮಾನ ಕೈಗೊಳ್ಳುವವರೆಗೆ ಟಿಎಪಿಸಿಎಂಎಸ್ ನ್ಯಾಯಬೆಲೆ ಅಂಗಡಿಯನ್ನು ಅಮಾನತ್ತಿನಲ್ಲಿ ಇಡಲಾಗಿದೆ ಹಾಗೂ ಈ ಗ್ರಾಮದ ಕಾರ್ಡುದಾರರಿಗೆ ನ್ಯಾಯಬೆಲೆ ವಸ್ತುಗಳನ್ನು ವಿತರಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗುತ್ತಿದೆ.

6. ಟಿಎಪಿಸಿಎಂಎಸ್‌ನ ಬಿಲ್ ಪುಸ್ತಕ, ದಾಸ್ತಾನು ಪುಸ್ತಕ ಮುಂತಾದವುಗಳ ದಾಖಲಾತಿಗಳು ಆಯಾ ಕಾರ್ಡುದಾರರ ಪಡಿತರ ಚೀಟಿಗಳಲ್ಲಿನ ದಾಖಲಾತಿಗೆ ತಾಳೆ ಇದೆಯೇ ಎಂಬುದನ್ನು ಪರೀಕ್ಷಿಸಲು ಪ್ರತಿಯೊಂದು ಕಾರ್ಡುಗಳನ್ನು ವಿವರವಾಗಿ ಪರಿಶೀಲನೆ ನಡೆಸಬೇಕಾಗಿರುವುದರಿಂದ, ಈ ಎಲ್ಲ ತನಿಖೆ ನಡೆದ ನಂತರ ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಬೊಂಬಾಯಿಯಲ್ಲಿ ನಡೆದ ಬಾಂಬ್ ಸ್ಫೋಟನೆಯ ಬಗ್ಗೆ

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೇ, ಈ ದಿವಸ ನಾನು, ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀ ರಾಯರೆಡ್ಡಿಯವರು, ಎರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳಿ ತಮ್ಮ ಪರವಾನಗಿ ಪಡೆದಿದ್ದೇವೆ. ಮೊದಲನೆಯದಾಗಿ ಬೊಂಬಾಬಿಯಲ್ಲಿ ನಡೆದ ಘಟನೆ, ಎರಡನೆಯದಾಗಿ ಶ್ರೀ ಗೋಪಿನಾಥ್ ಸಾಂಡ್ರರವರ ವಿಚಾರ. ಮೊದಲನೆಯದಾಗಿ ಶುಕ್ರವಾರ ಬೊಂಬಾಯಿಯಲ್ಲಿ ನಡೆದಿರತಕ್ಕಂಥ ನರಮೇಧದ ವಿಧ್ವಂಸಕ ಕೃತ್ಯ. ದೇಶದ ಪ್ರಜಾಪ್ರಭುತ್ವದ ಪದ್ಧತಿಯನ್ನು ಬುಡಮೇಲು ಮಾಡತಕ್ಕಂಥ ಈ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ನಾಮ ಮಾಡತಕ್ಕಂಥ ಒಂದು ಹೇಯ ಕೃತ್ಯ. ನಾನು ಇದು ಅತ್ಯಂತ ದುಃಖದ ವಿಚಾರವೆಂದು ತಿಳಿದಿರತಕ್ಕವನು. ಈ ಸದನ, ಈ ದಿವಸ ಪ್ರಾರಂಭವಾಗತಕ್ಕಂಥ ಸಂದರ್ಭದಲ್ಲಿ ಪ್ರಶ್ನೋತ್ತರಕ್ಕೆ ಮುಂಚೆ ಈ ಸಭೆಯ ನಾಯಕರಾದ ಮುಖ್ಯಮಂತ್ರಿಗಳು ಒಂದು ನಿರ್ಣಯವನ್ನು ಮಂಡಿಸಿ ನಮಗೆಲ್ಲರಿಗೂ ವಿಷಯವನ್ನು ತಿಳಿಸಿ, ದೇಶದಲ್ಲಿ ಆಗಿರುವಂತಹ ಈ ಒಂದು ಭಯದ ವಾತಾವರಣವನ್ನು ಬಗೆಹರಿಸುವುದಕ್ಕೆ ರಾಜ್ಯದ ಜನತೆಗೆ ಒಂದು ಮನವಿಯನ್ನು ಸಹ ಮಾಡುತ್ತಾರೆ ಎಂದು ನಿರೀಕ್ಷಣೆ ಮಾಡಿದ್ದೆ. ಈಗಲಾದರೂ ಸಹ ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ನಿರ್ಣಯವನ್ನು ಸದನದಲ್ಲಿ ಮಂಡಿಸಿ, ರಾಜ್ಯದ ಭಯ ಭೀತಗೊಂಡಿರುವಂತಹ ಜನತೆಯ ವಿಶ್ವಾಸವನ್ನು ತೆಗೆದುಕೊಳ್ಳುವುದರ ಜೊತೆಗೆ ಈ ವಿಧ್ವಂಸಕ ಕೃತ್ಯವನ್ನು ಖಂಡನೆ ಮಾಡುವಂತಹ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಬೊಂಬಾಯಿ ನಗರ ಆರ್ಥಿಕ ದೃಷ್ಟಿಯಿಂದ ಈ ದೇಶದ ರಾಜಧಾನಿ ಎನ್ನತಕ್ಕಂಥ ಮಾತನ್ನು ಕೇಳಿದ್ದೇವೆ. ದೇಶದ್ರೋಹಿಗಳು ಬೊಂಬಾಯಿ ನಗರವನ್ನೇ ಆರಿಸಿಕೊಳ್ಳಬೇಕಾದರೆ, ಇದು